ರೇಗಿಸಿತು. ನುಣುಪಾದ ಮಾಟವಾದ ಬೀಟೆ ಚಿನ್ನಿ. ದುಃಖ ಒತ್ತರಿಸಿ ಗಂಟಲಿಗೆ ಬಂತು. ಅತ್ರೆ 'ಹೆಣ್ಣಾಪುಸ್ಕಿ' ಅಂತಾರೆ ಎಂದು ಹಲ್ಲುಕಡಿದು ಅಳುವನ್ನು ಒತ್ತಿ ಹಿಡಿದ. 'ನಂಗೊತ್ತಿಲ್ಲ ಹೊಸ ಚಿನ್ನಿ ಮಾಡ್ಕೊಡು... ಇಲ್ಲ ಚಿನ್ನಿ ಹುಡುಕ್ಕೊಡು' ಎಂದು ಚಿನ್ನಿಯವನು ತರ್ಲೆ ತೆಗೆದ. ಹೋಗಲೇ ನಿನ್ ದಾಂಡ್ ಯಾರಿಗೆ ಬೇಕು ಎಂದು ದಾಂಡನ್ನ ಎಸೆದು ಗೆದ್ದವನು ಓಡಿದ. ಉಳಿದವರನ್ನು 'ಬರ್‍ರಲೆ ನಾವು ಗುಲ್ಪೋರಿಯಾ ಆಡಾಣ' ಎಂದು ಕರೆದುಕೊಂಡು ಹೋದ. ಚಿನ್ನಿ ಕಳೆದುಕೊಂಡ ದಾಂಡು ವಿಧುರನಂತೆ ಬಿದ್ದಿತ್ತು. ರಾಯರೂ ಅವನ ಬಳಿ ಬಂದು ಹುಡುಕತೊಡಗಿದರು. ನಿಧಾನಕ್ಕೆ ಸಂಜೆಯಾಗಿ, ಮರದ ಮೇಲೆ ಅದರ ಹಿಂದಿನ ತಾರಸಿ ಮನೆ ಮೇಲೆ ಲೈಟ್ ಕಂಬದ ತಂತಿಗಳ ಮೇಲೆಲ್ಲ ಬಿದ್ದ ಕೆಂಪಾದ ಸಂಜೆಯನ್ನು ಮಸಿ ಮಸಿ ಕತ್ತಲು ಕಸಿಯತೊಡಗಿತು. ದಾಂಡನ್ನು ಕೈಲಿ ಹಿಡಿದ ಹುಡುಗ ಅದು ಇಲ್ಲಿಂದ ಅಲ್ಲಿಗೆ ಹಾರಿತು... ಎಂದು ಒಂದು ಮರದ ಕೊಂಬೆಯ ಗುರುತು, ದೂರದ ಬೇಲಿಯ ಗುರುತು, ಸಕ್ರೆಕಾಯಿನ ಗಿಡದ ಗುರುತುಗಳನ್ನು ಹೇಳುತ್ತ ಅಲೆಯತೊಡಗಿದ. ಕತ್ತಲೆ ಸಹ ಹುಡುಕಲು ಅವನ ಜೊತೆಗೆ ಬಂದಿತು. ಚಿನ್ನಿ ಬಿದ್ದ ಗುರುತುಗಳೆಲ್ಲ ಮರೆಯಾಗತೊಡಗಿದಂತೆ ಚಿನ್ನಿ ಕಳೆದುಕೊಂಡ ಹುಡುಗ ನಾಳೆ ಯಾರನ್ನೂ ಆಟಕ್ಕೆ ಸೇರ್ಸಲ್ಲ ಎಂದು ಕೂಗಿಕೊಂಡು ಮನೆ ಕಡೆಗೆ ನಡೆದ.

ಸ್ವಲ್ಪ ದೂರ ಹೋದ ಕೂಡಲೇ ಮುಕುಂದರಾಯರ ಅಂಗಿಯ ತುದಿ ಜಗ್ಗಿದಂತಾಗಿ ಗುರ್ತಿನವರು ಕಡೆಗೂ ಸಿಕ್ಕರು ಎಂದು ಹಿಂದಿರುಗಿದರೆ, ಒಂದು ಕೈಲಿ ಅಂಗಿ ಚುಂಗು ಹಿಡಿದು ಇನ್ನೊಂದು ಕೈಲಿ ಕಣ್ಣ ತಿಕ್ಕುತ್ತ, ಮೂಗಲ್ಲಿ ಸಿಂಬಳ ಕಣ್ಣಲ್ಲಿ ನೀರು ಸುರಿಸುತ್ತಿದ್ದ ಪುಟ್ಟ ಹುಡುಗಿ... ಅದರ ಎರಡು ಜಡೆ, ಚಿಕ್ಕ ಲಂಗ, ಬಿಕ್ಕುವ ಬಿಕ್ಕಿಗೆ ಅಲ್ಲಾಡುತ್ತಿದ್ದ ತಲೆ... ಅಳ್ಬೇಡ ಪುಟ್ಟಿ ಎಂದು ಅದನ್ನು ಎತ್ತಿಕೊಂಡರು. ಮೂಗೊರೆಸಿ, ತಲೆ ಬೋಳೈಸಿ 'ಅಮ್ಮ ಬೇಕಾ'? ಎಂದ ಕೂಡಲೇ ಆಗಿನಿಂದ ಹೊರಡುತ್ತಿದ್ದ ಬಿಕ್ಕಿನ ಜತೆಗೆ 'ಹೋ' ಎಂಬ ಧ್ವನಿಯೂ ಸೇರಿಕೊಂಡಿತು. ಬಿಕ್ಕು ಮತ್ತೆ ಜೋರಾಯಿತು. 'ಪೆಪ್ಪರ್‌ಮೆಂಟ್, ಬಿಸ್ಕತ್ ತರಣಾ...' ಎಂದು ಅಂಗಡಿಯ ಕಡೆ ಮಗುವನ್ನು ಎತ್ತಿಕೊಂಡೇ ನಡೆದರು. 'ನಂಗೆ ಏನೂ ಬೇಡ, ಅಮ್ಮ ಬೇಕು.' 'ಅಮ್ಮನ್ನೂ ಕೊಡಸ್ತೀನಿ... ನಾನು ನಿನ್ನ ಫ್ರೆಂಡ್ ಅಲ್ವಾ...' ಎಂದು ಬಿಸ್ಕತ್, ಪೆಪ್ಪರ್‌ಮೆಂಟ್, ಚಾಕ್ಲೇಟ್ ಅದರ ಪುಟ್ಟ ಕೈ ತುಂಬಿಸುತ್ತಿದ್ದಂತೆ, ಚಾಕ್ಲೇಟ್ ಬಿಡಿಸಿ ಬಾಯಿಗಿಕ್ಕಿ ಚೀಪಿ ಚೀಪಿ ತೆಗೆದು ನೋಡಿತು. 'ನಿಮ್ಮನೆ ಎಲ್ಲಿ?' ಎಂದರು ರಾಯರು. 'ನಂಗೊತ್ತಿಲ್ಲ ಅಮ್ಮ ಅಮ್ಮ' ಎಂದು ಮತ್ತೆ ರಾಗ ಪ್ರಾರಂಭವಾಯ್ತು. 'ಪುಟ್ಟ ನಿಮ್ಮನೆ ಹತ್ರ ಯಾರ ಮನೆ ಇದೆ?'

'ನಂಗೊತ್ತಿಲ್ಲ. ಅಮ್ಮ ಬೇಕು... ಅಮ್ಮ' ಎಂಬ ಅಳುವಿನೊಂದಿಗೆ 'ನನ್ ರೈಲು ಆನೆಗೊಂಬೆ, ಕುದ್ರೆಗೊಂಬೆ, ಪಾಪುಗೊಂಬೆ ನೋಡ್ಬೇಕು. ನಾನು ಬಸ್ ಬಿಡ್ತೀನಿ. ರೈಲ್ ಬಿಡ್ತೀನಿ... ನೀನು ಬಾ ಬಸ್ನಲ್ಲಿ' ಎಂದು ಆಡಿದ ಆಟಗಳನ್ನೆಲ್ಲ ನೆನೆಸಿಕೊಳ್ಳುತ್ತ 'ನಂಗೆ ಬೇಗ ಮನೆಗೆ ಕಕ್ಕೊಂಡು ಹೋಗು' ಎಂದಿತು. 'ನಮ್ಮ ಮನೆಯಲ್ಲಿ ಒಂದು ದೊಡ್ಡ ಅಂಗ್ಳ ಇದೆ. ಅದ್ರಲ್ಲಿ ತೆಂಗಿನ ಮರ, ಸಂಪಿಗೆ ಮರ, ಪೇರ್ಲೆ ಮರ ಎಲ್ಲ ಇದೆ. ಪೇರಲೆಕಾಯಿಗೆ ಮಂಗಣ್ಣ ಅಳಿಲು ಕಾಗೆ ಎಲ್ಲಾ ಬರ್ತಾವೆ. ಸಂಪಿಗೆ ಮರಕ್ಕೆ ಹಾವು ಬರತ್ತೆ. ಅದು ಇಷ್ಟೂದ್ದ' ಎಂದು... ಎಂದು ಎರಡು ಕೈಗಳನ್ನು ಅಕ್ಕಪಕ್ಕ ತಂದು ಅಳತೆ ತೋರಿಸಿತು.

'ಹಾವು ನಿಂಗೆ ಕಚ್ಚಲ್ವಾ?' 'ನಂಗೇನೂ ಮಾಡಲ್ಲ. ನಾಗ್ರ ಪಂಚಮೀಲಿ ಅದಕ್ಕೆ ಹಾಲು ಕೊಡ್ತೀವಿ. ತಂಬಿಟ್ ಕೊಡ್ತೀವಿ. ಅದ್ಕೆ ಅದು ಕಚ್ಚಲ್ಲ... ಶಾಮ್ಲಿ, ನಾನು, ರೂಪ ಚಂಪಿ ಎಲ್ಲ ಜೋಕಾಲಿ ಆಡ್ತೀವಿ. ನಾಳೆ ರಜಾ, ಮನೆ ಆಟ ಆಡ್ತೀವಿ. ನಂಗೆ ಮೈಸೂರ್ ಪಾಕ್ ಅಂದ್ರೆ ಇಷ್ಟ... ಅದನ್ನು ಮಾಡ್ತೀವಿ. ಯುಗಾದಿ ಹಬ್ಬ ಮಾಡ್ತೀವಿ...' ಎಂದೆಲ್ಲ ಮನೆಯ ಆಟದ ವರ್ಣನೆ ಮಾಡುತ್ತಾ ಕಣ್ಣಲ್ಲಿ ಮನೆಯನ್ನು ತುಂಬಿಕೊಂಡಿತು.

'ನೀನು ಎಷ್ಟನೇ ಕ್ಲಾಸ್?' ಎಂದರು ರಾಯರು.

'ನಾನಾ? ಫಸ್ಟ್ ಸ್ಟಾಂಡರ್ಡ್, ಅಲ್ಲ ಯೂಕೆಜಿ, ಹತ್ತು, ಎಂಟು' ಎಂದು ಹೇಳುತ್ತ ತರಗತಿಗಳನ್ನ ಏರಿಸಿ ಇಳಿಸುತ್ತ ಹೋಯಿತು.

'ನಿಮ್ಮ ಮೇಡಂ ಹೆಸ್ರೇನು?'

'ಜಲ್ಜ ಮಿಸ್... ತುಂಬಾ ಒಳ್ಳೆವ್ರು... ಬೆಳ್ಳಗಿದ್ದಾರೆ...'

'ಅವ್ರ ಮನೆ ಎಲ್ಲಿ?'

'ಅವ್ರ ಮನೆ ತುಂಬಾ ದೂರ... ನಮ್ಮನೇಲಿ ನನ್ ಬರ್ತ್‌ಡೆ ಆಯಲ. ಆಗ ಆ ಮಿಸ್ ಬಂದಿದ್ರು. ನಮ್ಮ ಕ್ಲಾಸ್ ಹುಡುಗ್ರೆಲ್ಲಾ ಬಂದಿದ್ರು... ಅವತ್ತು ಅಮ್ಮ ಜಾಮೂನ್ ಮೈಸೂರ್ ಪಾಕ್ ಎಲ್ಲಾ ಮಾಡಿದ್ರು. ನೀನು ಬಾ ನಿಂಗೂ ಕೊಡ್ತೀನಿ.'



'ನಿಮ್ಮ ಮನೆ ರಸ್ತೆ ಹೆಸರು ಹೇಳು ಮರಿ...'

'ನಂಗೊತ್ತಿಲ್ಲ'

'ಅಪ್ಪನ ಹೆಸ್ರೇನು?'

'ರಾಜಾರಯ್ರೂ. ಅಮ್ಮನ್ನೆಸ್ರು ಕಾತ್ಯಾಯ್ನಿ...'

'ಮನೆ ಹತ್ರ ಏನಿದೆ?'

'ನಮ್ಮನೆ ಹತ್ರ ಗಣಪತಿ ದೇವಸ್ಥಾನ ಇದೆ. ಮನೆ ಮುಂದೆ ಶಾಮ್ಲಿ ಮನೆ ಇದೆ. ಈ ಕಡೆ ಪಕ್ಕದಲ್ಲಿ ರೂಪ ಮನೆ. ಅದ್ರಲ್ಲಿ ಒಂದು ಬಾವಿ ಇದೆ. ಅದ್ರಲ್ಲಿ ಒಂದು ಆಮೆ, ಮೀನುಗಳು ಕಪ್ಪೆ ಎಲ್ಲ ಇದೆ... ನನ್ನ ಮನೆಗೆ ಕರ್ಕೊಂಡು ಹೋಗು. ಅಮ್ಮನ್ನ ನೋಡ್ಬೇಕು... ನನ್ ಪಾಪುಗೆ ಹಾಲು ಕುಡುಸ್ಬೇಕು. ಅದು ಹಸ್ಕಾಗಿ ಅಳ್ತಿರತ್ತೆ... ಪಾಪು ಪಾಪು...' ಎಂದು ಮತ್ತೆ ಅಳತೊಡಗಿತ್ತು. ಅವರ ಮನೆ, ಅವರ ಟೀಚರ್, ಅಕ್ಕಪಕ್ಕದವರು ಯಾರು ಸಿಕ್ಕರೂ ಸರಿ... ಮನೆ ಹುಡುಕಬಹುದು. ಈ ಮಗು ಹೆದರಿ ಗೊಂದಲದಲ್ಲಿ ಎಲ್ಲ ಮರೆತಿದೆ ಅಥವಾ ವಿಳಾಸ ಹೇಳಲು ತಿಳಿಯುತ್ತಿಲ್ಲ. ಇದನ್ನ ಮನೆಗೆ ತಲುಪಿಸಿದರೆ, ತಂದೆ ತಾಯಿಗಳಿಗೊಪ್ಪಿಸಿದರೆ ನನ್ನ ಜವಾಬ್ದಾರಿ ಮುಗಿಯಿತು ಎಂದು ಕಂಗಾಲಾಗಿದ್ದ ಮಗುವನ್ನೆತ್ತಿಕೊಂಡು ಹೋಟೆಲ್ಲಿಗೆ ಹೋದರು. ಹುಡುಗಿ ದೋಸೆ ಬೇಕು ಅಂದಿತು. ದೋಸೆ ಬಂದಿತು. ಕಾಫಿ ಬಂದಿತು, ಮೈ ಮೇಲೆ ಕಾಫಿ ಚೆಲ್ಲಿಕೊಳ್ಳುತ್ತ ಕುಡಿಯಿತು.

ಹಸಿವು ನಿಧಾನವಾದ ಮೇಲೆ ಪುಟ್ಟಿ ಸ್ವಲ್ಪ ಗೆಲುವಾಯಿತು. ನನ್ನ ಮನೇನೆ ನಂಗೆ ಮರೆತುಹೋಗಿದೆ. ಈಗ ಹೊಸಮನೆ, ಹೊಸ ಅಪ್ಪ, ಅಮ್ಮ... ಎಲ್ಲವನ್ನ ಹುಡುಕಬೇಕಾಗಿದೆ.

'ನೋಡು ನಿನ್ ಕ್ಲಾಸು, ಮಿಸ್ಸು, ಅವ್ರ ಮನೆ' ಎಲ್ಲ ಸರಿಯಾಗಿ ಹೇಳಿದ್ರೆ ಬೇಗ ಅಮ್ಮನ್ನ ತೋರಿಸ್ತೀನಿ...'

'ನಮ್ಮ ಮಿಸ್ ಜಲ್ಜ ಮಿಸ್, ಆಗಲೇ ಹೇಳ್ಲಿಲ್ವ?'

ಅಮ್ಮ ಅಮ್ಮ ಎಂದು ಮತ್ತೆ ಹಳೇ ರಾಗ ಹಾಡತೊಡಗಿತು. ರಸ್ತೆಯಲ್ಲಿ ನಡೆಯುತ್ತ ಒಂದೆರಡು ಕಡೆ 'ಈ ಹುಡುಗಿ ಯಾರದ್ದು ಗೊತ್ತ?' ಎಂದರೆ ಕೆಲವರು ಗುಮಾನಿಯಿಂದ ನೋಡಿದರು. ಪುಟ್ಟಿ ಉಚ್ಚೆ ಹೊಯ್ಯಬೇಕು ಎಂಬಂತೆ ಕಿರುಬೆರಳನ್ನು ಉದ್ದ ಮಾಡಿ ತೋರಿಸಿತು. ಪುಟ್ಟಿಯನ್ನು ಬೇವಿನ ಮರದ ಹತ್ತಿರ ಕೂರಿಸಿದರು. ನೀನು ಆ ಕಡೆ ತಿರುಗು... ಶೇಂ, ಶೇಂ...' ಎಂದಿತು. ರಾಯರು ಅದಕ್ಕೆ ಬೆನ್ನು ಹಾಕಿ ನಿಂತರು.

'ಆಯ್ತು, ಇನ್ನು ಮನೆಗೋಗಣ...' ಎಂದಿತು. ಮುಕುಂದರಾಯರಿಗೆ ಉಳಿದ ದಾರಿ ಒಂದೇ. ಹತ್ತಿರದಲ್ಲಿ ಎಲ್ಲಾದರೂ ಪೋಲಿಸ್ ಸ್ಟೇಶನ್ ಇದ್ದರೆ ಅಲ್ಲಿಗೆ ಹೋಗಿ ಎಲ್ಲ ಕಡೆ ಮೆಸೇಜ್ ಕೊಡುವಂತೆ ಮಾಡುವುದು... ಠಾಣೆ ಎಲ್ಲಿ ಎಂದು ದಾರಿಹೋಕರನ್ನ ಕೇಳಿದರು. ಒಬ್ಬ ಇಲ್ಲಿಂದ ಮುಂದೆ ಹೋಗಿ ದೊಡ್ಡ ಗಡಿಯಾರದ ಬಿಲ್ಡಿಂಗ್ ಇದೆ, ಅದರ ಪಕ್ಕ ಎಂದ.

ಮುಕುಂದರಾಯರು ಠಾಣೆಗೆ ಬಂದು, ಒಳಗೆ ಹೊದರು. ರಾಯರು 'ದಾರೀಲಿ ಸಿಕ್ತು. ಮನೆ, ತಂದೆ, ತಾಯಿ ಎಲ್ಲಿ ಕೇಳಿ ಕೇಳಿ ಸಾಕಾಯ್ತು...' ಎಂದು ಎಲ್ಲ ವಿವರಿಸಿದರು. ಫೋನ್ ರಿಂಗ್ ಆಗತೊಡಗಿತು.

ಕಡೆಗೆ ತಂದೆ, ತಾಯಿ ಬಂದರು.

ಪುಟ್ಟಿ ಅವರ ಮಡಿಲಿಗೆ ಸೇರಿತು.

ರಾಜಾರಾಯರು, ಮುಕುಂದರಾಯರನ್ನ ಹೊಗಳಿದರು. ಥ್ಯಾಂಕ್ಸ್ ಎಂದರು.

ತಾಯಿಯ ಕಣ್ಣ ತುಂಬ ನೀರು.

'ಬನ್ನಿ ಸಾರ್ ಬನ್ನಿ... ನಿಮ್ಮನ್ನ ಮನೆಗೆ ಬಿಟ್ಟು ಹೋಗ್ತೀವಿ' ಎಂದರು ರಾಜಾರಾಯರು.

'ಪರ್ವಾಗಿಲ್ಲ, ನಾನು ಹೋಗ್ತೀನಿ...'

ರಾಜಾರಾಯರ ಕಾರು ಮುಕುಂದರಾಯರ ಬಳಿ ಬರುವಷ್ಟರಲ್ಲಿ ಒಂದು ಕಾರು ಬಂದಿತು. ಅದರಿಂದ ಅವರ ಹೆಂಡತಿ, ಮಗ, ಸೊಸೆ, ಮೊಮ್ಮಗ ಎಲ್ಲ ಇಳಿದರು.

ಪ್ರತಿಕ್ರಿಯಿಸಿ: **feedback@sudha.co.in**